ದಿನಾಂಕ 29-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀಮತಿ. ಎಮ್ ಆರ್ ರವರಿಂದಃ

ನಾನು ಬಿ ಎಸ್ ಸಿ ಪದವಿ ತನಕ ವಿದ್ಯಾಬ್ಯಾಸ ಮಾಡಿರುತ್ತೇನೆ. ನಾನು ಈಗ **Uni Orbi Tec Company** ಆಪರೇಷನ್ ತಂಡದ ಸೀನಿಯರ್ **Executive** ಆಗಿ **6** ವರ್ಷಗಳಿಂದ ಕೆಲಸ ಮಾಡುತ್ತಿರುತ್ತೇನೆ. ನನಗೆ ವಾರ್ಷಿಕವಾಗಿ **5,00,000/-**ಸಂಬಳ ಬರುತ್ತದೆ. ನಾನು ಸುಮಾರು **6** ವರ್ಷಗಳಿಂದ ಬೆಂಗಳೂರಿನಲ್ಲಿ ವಾಸ ಮಾಡುತ್ತಿರುತ್ತೇನೆ. ಆರೋಪಿಯು ನಾನು ಮೊದಲು ಕೆಲಸ ಮಾಡುತ್ತಿದ್ದ **Red Bus** ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ **2018-2019** ನೇ ಸಾಲಿನಲ್ಲಿ ಅವರ ಪರಿಚಯ ನನಗೆ ಆಗಿರುತ್ತದೆ.

**2.** ಆರೋಪಿಯಿಂದ ನಾನು ಹಣವನ್ನು ಪಡೆಯುತ್ತಿದ್ದೆ ಹಾಗೂ ಆರೋಪಿಗೆ ನಾನು ಹಣವನ್ನು ನೀಡುತ್ತಿದ್ದೆ ಎಂದರೆ ಸರಿಯಲ್ಲ, ನಾನು ಮಾತ್ರ ಆರೋಪಿಗೆ ಹಣವನ್ನು ನೀಡುತ್ತಿದ್ದೆ. ಆರೋಪಿಯು ನನ್ನ ಬಳಿ ಮೊದಲಿಗೆ ಜೂನ್ ಮಾಹೆಯಲ್ಲಿ ಹಣವನ್ನು ಕೇಳಿದ್ದು ನಾನು ಆರೋಪಿಗೆ ಜುಲೈ ತಿಂಗಳಲ್ಲಿ **4,50,000/-**ರೂಗಳನ್ನು ನಗದಾಗಿ ನೀಡಿರುತ್ತೇನೆ. ನಾನು ನಮ್ಮ ಕುಟುಂಬದ ಸದಸ್ಯರಲ್ಲೆರೂ ಸಂಪಾದನೆ ಮಾಡಿದ ಹಣವನ್ನು ಮದುವೆಗಾಗಿ ಇಟ್ಟುಕೊಂಡಿದ್ದು ಸದರಿ ಹಣವನ್ನು ನಾನು ಆರೋಪಿಗೆ ನೀಡಿರುತ್ತೇನೆ. ನಾನು **2019** ನೇ ಸಾಲಿನ ಅಕ್ಟೋಬರ್ ಮಾಹೆಯಲ್ಲಿ **Red Bus** ಕಂಪನಿಯಲ್ಲಿ ಕೆಲಸವನ್ನು ಬಿಟ್ಟಿರುತ್ತೇನೆ. ನಾನು ಆರೋಪಿಗೆ ನೀಡಿದ ಹಣವನ್ನು ಕೊಡುವಂತೆ ಕೇಳುತ್ತಿದ್ದ ಕಾರಣ ನನ್ನ ಕಂಪನಿಯಲ್ಲಿ ನನ್ನ ಜೊತೆ ಕೆಲಸ ಮಾಡುತ್ತಿದ್ದವರು ಆ ಬಗ್ಗೆ ಮಾತನಾಡುತ್ತಿದ್ದ ಕಾರಣ ಹಾಗೂ ನನ್ನ ಮನೆಯವರು ಆ ಕಂಪನಿಯವರು ಆ ಕೆಲಸವನ್ನು ಮಾಡಬೇಡ ಎಂದು ಹೇಳಿದ ಕಾರಣ ನಾನು **Red**

**Bus** ಕಂಪನಿಯಲ್ಲಿ ಕೆಲಸವನ್ನು ಬಿಟ್ಟಿರುತ್ತೇನೆ. ಸಾಲ ಕೊಟ್ಟವರಿಗೆ ಯಾವುದೇ ತೊಂದರೆಯಾಗುವುದಿಲ್ಲ, ಸಾಲ ಪಡೆದವರಿಗೆ ತೊಂದರೆಯಾಗುತ್ತದೆ ಎಂದರೆ ಸರಿಯಲ್ಲ.

**3.** ನಾನು **Red Bus** ಕಂಪನಿಯಲ್ಲಿ ಕೆಲಸವನ್ನು ಬಿಡಲು ಅರ್ಜಿಯನ್ನು ಅಂತರ್ಜಾಲದ ಮೂಲಕ ಸಲ್ಲಿಸಿದ್ದು ಸದರಿ ಕಂಪನಿಯ ಇ -ಮೇಲ್ ವಿಳಾಸ ನನ್ನ ಬಳಿ ಇಲ್ಲದೇ ಇರುವ ಕಾರಣ ನಾನು ಸಲ್ಲಿಸಿದ ರಾಜೀನಾಮೆ ಪತ್ರ ಅನ್ನು ಸಲ್ಲಿಸಲಾಗುವುದದಿಲ್ಲ. ನಾನು **Red Bus** ಕಂಪನಿಯಲ್ಲಿ ಕೆಲಸ ಬಿಟ್ಟ ಕಾರಣ ಸದರಿ ಕಂಪನಿಗೆ ಸಂಬಂದಿಸಿದ ಇ -ಮೇಲ್ ವಿಳಾಸ ನನ್ನ ಬಳಿ ಇರುವುದಿಲ್ಲ. ನಾನು **Red Bus** ಕಂಪನಿಯಲ್ಲಿ ಕೊನೆಯದಾಗಿ ಪಡೆದುಕೊಂಡ ಸಂಬಳದ ರಸೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನಾನು **2019** ನೇ ಸಾಲಿನ ಪೆಬ್ರವರಿ ಮಾಹೆಯಲ್ಲಿ **Red Bus** ಕಂಪನಿಯಲ್ಲಿ ಕೆಲಸವನ್ನು ಬಿಟ್ಟಿದ್ದರೂ ಸಹ **2019** ನೇ ಸಾಲಿನ ಅಕ್ಟೋಬರ್ ಮಾಹೆಯಲ್ಲಿ ಕೆಲಸವನ್ನು ಬಿಟ್ಟಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**4.** ನಾನು ಆದಾಯ ತೆರಿಗೆಯನ್ನು ಪಾವತಿ ಮಾಡುವುದಿಲ್ಲ. ನನಗೆ ಸೇರಿದ **2** ಬ್ಯಾಂಕ್ ಖಾತೆಗಳು ಇದ್ದು, ಈಗ ಒಂದು ಬ್ಯಾಂಕ್ ಖಾತೆಯಲ್ಲಿ ಹಣದ ವ್ಯವಹಾರವನ್ನು ಮಾಡುತ್ತಿರುತ್ತೇನೆ. **2018-19** ನೇ ಸಾಲಿನಲ್ಲಿ ನನ್ನ ಹೆಸರಿನಲ್ಲಿ ಎಸ್ ಬಿ ಐ, ಕೋಟಕ್ ಮಹೇಂದ್ರ, **Yes** ಬ್ಯಾಂಕ್ ಹಾಗೂ ನಮ್ಮ ಗ್ರಾಮದಲ್ಲಿರುವ ಪ್ರಗತಿ ಗ್ರಾಮೀಣಾ ಬ್ಯಾಂಕ್ ನಲ್ಲಿ ಖಾತೆಗಳಿದ್ದವು. ನಾನು ಕೆಲಸಕ್ಕೆ ಸೇರುವ ಮೊದಲೇ ಎಸ್ ಬಿ ಐ ಹಾಗೂ ಪ್ರಗತಿ ಕ್ರಿಷ್ಣಾ ಗ್ರಾಮೀಣಾ ಬ್ಯಾಂಕ್ ಗಳಲ್ಲಿ ಖಾತೆಗಳನ್ನು ಮಾಡಿಸಿದ್ದು ನಾನು ಕೆಲಸಕ್ಕೆ ಸೇರಿದ ನಂತರ **Red Bus** ಕಂಪನಿಯವರು ಕೋಟಕ್ ಮಹೇಂದ್ರ ಬ್ಯಾಂಕ್ ನಲ್ಲಿ ನನ್ನ ಖಾತೆಯನ್ನು ತೆರಸಿದ್ದು ನಂತರ ನಾನು **Yes** ಬ್ಯಾಂಕ್ ನಲ್ಲಿ ಖಾತೆಯನ್ನು ತೆರೆದಿರುತ್ತೇನೆ. ನಾನು, ನನ್ನ ತಂದೆ ಹಾಗೂ ನನ್ನ ತಾಯಿ ಸೇರಿ ಚೀಟಿಯನ್ನು ಹಾಕಿ ತಿಂಗಳಿಗೆ ತಲಾ **10,000/-**ರೂಗಳನ್ನು ಕಟ್ಟುತ್ತಿದ್ದು, ಸದರಿ ಚೀಟಿಯಿಂದ ಬಂದ ಹಣ ಹಾಗೂ ನಮ್ಮ ಕುಟುಂಬದ ಕೃಷಿ ಇಂದ ಬಂದ ಹಣವನ್ನು ಸೇರಿಸಿ ಒಟ್ಟು **2** ಬಾರಿ ಒಟ್ಟು **9,00,000/-** ಲಕ್ಷ ಹಣವನ್ನು ಆರೋಪಿಗೆ ನೀಡಿರುತ್ತೇನೆ.

ನಾನು, ನನ್ನ ತಂದೆ ಹಾಗೂ ನನ್ನ ತಾಯಿ ಸೇರಿ ಹಾಕಿದ್ದ ಚೀಟಿಗೆ ಸಂಬದಿಸಿದಂತೆ ಯಾವುದೇ ದಾಖಲೆಗಳು ಇಲ್ಲದೇ ಇರುವ ಕಾರಣ ಆ ಬಗ್ಗೆ ನಾನು ದಾಖಲೆಗಳನ್ನು ಹಾಜರುಪಡಿಸಲು ಆಗುವುದಿಲ್ಲ. ನಮ್ಮ ಕುಟುಂಬಕ್ಕೆ ಸೇರಿದ **3** ಎಕರೆ ವ್ಯವಸಾಯ ಜಮೀನು ಇರುತ್ತದೆ. ನನಗೆ **9,00,000/-**ರೂಗಳನ್ನು ಆರೋಪಿಗೆ ನೀಡುವಷ್ಟು ಆರ್ಥಿಕ ಸಾಮರ್ಥ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ.

**5.** ನಾನು **Red Bus** ಕಂಪನಿಯಲ್ಲಿ ಕೆಲಸವನ್ನು ಬಿಟ್ಟ ನಂತರವು ಆರೋಪಿಯ ಜೊತೆ ಮಾತನಾಡಿರುತ್ತೇನೆ, ನಾನು ಕೊನೆಯದಾಗಿ ಯಾವಾಗ ಆರೋಪಿ ಜೊತೆ ಮಾತನಾಡಿರುತ್ತೇನೆ ಎಂದು ನಿಖರವಾಗಿ ವರ್ಷ, ತಿಂಗಳು ಮತ್ತು ದಿನಾಂಕ ನನ್ನಿಂದ ಹೇಳಲಾಗುವುದಿಲ್ಲ. **2019** ನೇ ಸಾಲಿನ ಪೆಬ್ರವರಿ ಮಾಹೆಯಲ್ಲಿ ಆರೋಪಿ ಖಾತೆಯಿಂದ ನನ್ನ ಖಾತೆಗೆ **2,50,000/-**ರೂಗಳು ವರ್ಗಾವಣೆಯಾಗಿರುತ್ತದೆ ಎಂದರೆ ನಿಖರವಾಗಿ ದಿನಾಂಕ ಮತ್ತು ತಿಂಗಳು ನನ್ನಿಂದ ಹೇಳಲಾಗುವುದಿಲ್ಲ. ನಾನು **Red Bus** ಕಂಪನಿಯಲ್ಲಿ ನನ್ನ ಜೊತೆ ಕೆಲಸ ಮಾಡುತ್ತಿದ್ದವರ ಬಳಿ ನಾನು ಸಾಲ ಮಾಡಿರುವ ಕಾರಣ ನಾನು ಕೆಲಸವನ್ನು ಬಿಟ್ಟಿರುತ್ತೇನೆ ಎಂದರೆ ಸರಿಯಲ್ಲ. **2019** ನೇ ಸಾಲಿನಲ್ಲಿ ನಾನು **9071890199** ಮತ್ತು **7760045473** ಮೊಬೈಲ್ ಸಂಖ್ಯೆಗಳನ್ನು ಬಳಸುತ್ತಿದ್ದೆ. ಸದರಿ ಮೊಬೈಲ್ ಸಂಖ್ಯೆಗಳನ್ನು ಈಗ ನಾನು ಬಳಸುತ್ತಿರುವುದಿಲ್ಲ, ಅವುಗಳನ್ನು ಯಾವಾಗ ಸ್ಥಗಿತಗೊಳಿಸಿರುತ್ತೇನೆಂದು ನನ್ನಿಂದ ನಿಖರವಾಗಿ ಹೇಳಲಾಗುವುದಿಲ್ಲ. ನನ್ನ ಬಳಿ ಆರೋಪಿ ಹಣ ಕೇಳಿದ ಬಗ್ಗೆ ನನ್ನ ಹಿಂದಿನ ಮೊಬೈಲ್ ಸಂಖ್ಯೆಗಳಲ್ಲಿ ಮಾತನಾಡಿದ ಬಗ್ಗೆ ದಾಖಲೆಗಳು ಇದ್ದು ಈಗ ಸದರಿ ಮೊಬೈಲ್ ಸಂಖ್ಯೆಗಳನ್ನು ನಾನು ಬಳಸುತ್ತಿಲ್ಲದ ಕಾರಣ ಆ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಲಾಗುವುದಿಲ್ಲ. **2019** ನೇ ಸಾಲಿನ ಪೆಬ್ರವರಿ ಮಾಹೆಯಲ್ಲಿ ನನ್ನ ಮೊಬೈಲ್ ಸ್ವಿಚ್ ಆಪ್ ಆದ ಕಾರಣ ಆರೋಪಿಯು ಅವರ ಬ್ಯಾಂಕ್ ಖಾತೆಯನ್ನು **STOP PAYMENT** ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲೋಡು ಪ್ರಗತಿ ಕ್ರಿಷ್ಣಾ ಗ್ರಾಮೀಣಾ ಬ್ಯಾಂಕ್ ನಲ್ಲಿ ನನ್ನ ಖಾತೆಯಿದ್ದ ಕಾರಣ ನಾನು ನಿಪಿ**-1** ಅನ್ನು ಸದರಿ ಬ್ಯಾಂಕ್ ನಲ್ಲಿ ನಗದೀಕರಣಕ್ಕೆ ಹಾಜರುಪಡಿಸಿರುತ್ತೇನೆ, ಬೆಂಗಳೂರಿನ ಶಾಖೆಗಳಲ್ಲಿ ಹಾಜರುಪಡಿಸಿರುವುದಿಲ್ಲ.

**6.** ನಿಪಿ-**1** ರಲ್ಲಿರುವ ಹಣದ ಮೊತ್ತವನ್ನು ಆರೋಪಿಯ ಸಮ್ಮುಖದಲ್ಲಿ ನಮ್ಮ ಮನೆಯಲ್ಲಿ ನಾನೇ ಬರೆದಿರುವ ಕಾರಣ ನಿಪಿ-**1** ರಲ್ಲಿರುವ ಸಲೀಮ್‌ಪಾಷರವರ ಸಹಿಗೂ ಸದರಿ ದಾಖಲೆಯಲ್ಲಿರುವ ಹಣದ ಮೊತ್ತದ ಬರವಣಿಗೆಯ ಶಾಹಿಯೂ ಬೇರೆ ಬೇರೆಯಾಗಿರುತ್ತದೆ. ಆರೋಪಿಯು ನಾನು ವಾಸವಿರುವ ಮೈಕ್ರೋ ಲೇ ಔಟ್ ನ ಮನೆಗೆ ಬಂದಿರುತ್ತಾರೆ. ಆಗ ನನ್ನ ಜೊತೆಯಲ್ಲಿ ನಮ್ಮ ಮನೆಯಲ್ಲಿ ನನ್ನ ತಾಯಿ ಇದ್ದರು, ಅದನ್ನು ಬಿಟ್ಟು ಬೇರೆ ದಾಖಲೆಗಳು ಇರುವುದಿಲ್ಲ. ಅದೇ ದಿನ ನಾನು ಆರೋಪಿಗೆ ಹಣವನ್ನು ನೀಡಿರುತ್ತೇನೆ, ಆರೋಪಿ ನನಗೆ ಚೆಕ್ ಅನ್ನು ನೀಡಿರುತ್ತಾರೆ. ನಾನು ಆರೋಪಿಗೆ ನೀಡಿದ ಹಣವನ್ನು ನಮ್ಮ ಗ್ರಾಮದವರಿಂದ ತೆಗೆದುಕೊಂಡು ಹೋಗಿ ಬೆಂಗಳೂರಿನಲ್ಲಿ ಇಟ್ಟುಕೊಂಡಿದ್ದೆ. **2019** ನೇ ಸಾಲಿನ ಫೆಬ್ರವರಿ ಮಾಹೆಯಲ್ಲಿ ನನ್ನ ಹಾಗೂ ಆರೋಪಿಯ ಸಂಪರ್ಕ ಕೊನೆಯಾಗಿದ್ದು ನಂತರ ನನ್ನನ್ನು ಆರೋಪಿ ಬೇಟಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

**7.** ನನ್ನ ಸಾಕ್ಷ್ಯಪ್ರಮಾಣ ಪತ್ರದಲ್ಲಿ ನನ್ನ ವೃತ್ತಿ ವ್ಯವಸಾಯ ಎಂದು ಕಾಣಿಸಿರುತ್ತೇನೆ ಎಂದರೆ ಸರಿ, ವ್ಯವಸಾಯವು ನನ್ನ ತಂದೆಯ ವೃತ್ತಿಯಾಗಿರುತ್ತದೆ. ನನ್ನ ಹುಟ್ಟಿದ ಸ್ಥಳ ಚೋಳಶೆಟ್ಟಿ ಹಳ್ಳಿ ಗ್ರಾಮವಾದ ಕಾರಣ ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನನ್ನ ವಾಸ ಸ್ಥಳ ಚೋಳಶೆಟ್ಟಿ ಹಳ್ಳಿ ಎಂದು ಕಾಣಿಸಿರುತ್ತೇನೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನನ್ನ ಉದ್ಯೋಗ ಹಾಗೂ ನನ್ನ ಸಂಬಳದ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನನ್ನ ಹಣಕಾಸಿನ ವ್ಯವಹಾರ ನನ್ನ ಪ್ರಕಾರ ನಾನು ಬೆಂಗಳೂರಿನಲ್ಲಿ ಮಾಡುತ್ತಿದ್ದು, ಆರೋಪಿಗೆ ತೊಂದರೆ ನೀಡುವ ಸಲುವಾಗಿ ನಿಪಿ-**1** ಅನ್ನು ಎಲ್ಲೋಡು ಪ್ರಗತಿ ಕ್ರಿಷ್ಣಾ ಗ್ರಾಮೀಣಾ ಬ್ಯಾಂಕ್ ಶಾಖೆಯಲ್ಲಿ ಹಾಜರು ಮಾಡಿ ಈ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**8.** ನಿಪಿ-**3** ಕ್ಕೆ ನಾನು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ-**3** ಅನ್ನು ಆರೋಪಿಗೆ ನಾನು ನೀಡಿದ ನಂತರ ಆರೋಪಿಗೆ ನಾನು ಕರೆ ಮಾಡಿ ಮಾತನಾಡಿರುತ್ತೇನೆ. ನಾನು ಆರೋಪಿಗೆ ಕರೆ ಮಾಡಿರುವುದಿಲ್ಲ, ಕರೆ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**9.** ನಾನು ನಮ್ಮ ಗ್ರಾಮದವರಿಂದ **7** ಲಕ್ಷ ಸಾಲವನ್ನು ಪಡೆದಿರುತ್ತೇನೆ. ಆರೋಪಿ ಮನೆಯು ಬೆಂಗಳೂರಿನ ಆರ್ ಟಿ ನಗರದ ಮಂಜುನಾಥ ಲೇ ಔಟ್ ನಲ್ಲಿದ್ದು ನಾನು ಅವರ ಮನೆಗೆ ಬೇಟಿ ನೀೀಡಿರುತ್ತೇನೆ, ನಿಖರವಾಗಿ ಯಾವ ವರ್ಷ, ತಿಂಗಳು ಮತ್ತು ದಿನಾಂಕ ನನ್ನಿಂದ ಹೇಳಲಾಗುವುದಿಲ್ಲ.

ಮರು ವಿಚಾರಣೆಃ ಇಲ್ಲಃ

**(<u>ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಗಣಕೀಕೃತಗೊಳಿಸಲಾಯಿತು</u>)**

ಓ.ಹೇ.ಕೇ.ಸ.ಇದೆ.

ಸಿ.ಜೆ ಮತ್ತು ಜೆ.ಎಮ್.ಎಫ್.ಸಿ
ಗುಡಿಬಂಡೆ.